Reg. No. | | | | | | | | | |

**BCAKALN 102**

**I Semester B.C.A. Degree Examination, February/March 2023**
**(NEP 2020) (2022 – 2023 Batch Onwards)**
**KANNADA (AECC)**

Time : 2 Hours Max. Marks : 60

I. **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×8=24)**

1) ಕರ್ನಾಟಕದ ಸಾಂಸ್ಕೃತಿಕ ವಿವರಗಳು 'ಕನ್ನಡಿಗರ ತಾಯಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?

**ಅಥವಾ**

'ಖಗ್ರಾಸ ಗ್ರಹಣೋಪಖ್ಯಾನ' ಕವನದ ಆಶಯವನ್ನು ಬರೆಯಿರಿ.

2) ಮೂಢ ನಂಬಿಕೆಗಳಿಗೆ ಬಲಿ ಬೀಳದೆ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂಬ ಆಶಯವನ್ನು 'ನವಗ್ರಹ ಪರಿಕಲ್ಪನೆ' ಪ್ರಬಂಧದ ಹಿನ್ನೆಲೆಯಿಂದ ವಿವರಿಸಿರಿ.

**ಅಥವಾ**

ಸ್ವಾನುಭವದ ನೆಲೆಯ ವಿವರವನ್ನು 'ಮುಗಿಲುಗಳು' ಪ್ರಬಂಧದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

3) ಅನ್ಯಾಯ ಅಸಮಾನತೆಗಳು ನಿರಂತರವಾಗಿವೆಯೆಂಬ ಕಹಿ ಸತ್ಯವು 'ಅಮಾಸ' ಕತೆಯಲ್ಲಿ ಪ್ರಕಟಗೊಂಡ ಬಗೆಯನ್ನು ವಿವರಿಸಿರಿ.

**ಅಥವಾ**

ಪ್ರಮುಖ ಸಾಮಾಜಿಕ ಜಾಲತಾಣಗಳನ್ನು ಪರಿಚಯಿಸಿ.

II. **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **(3×5=15)**

1) ನಿಸರ್ಗವನ್ನು ದೇವರ ಸಮವಾಗಿ ಭಾವಿಸಿದ ರೀತಿ 'ದೇವರು ರುಜು ಮಾಡಿದನು' ಕವನದಲ್ಲಿ ಹೇಗೆ ಕಾಣಬಹುದು ?

**ಅಥವಾ**

'ಹುಚ್ಚು ಕೋಡಿ ಮನಸು' ಕವನದ ಆಶಯವನ್ನು ಬರೆಯಿರಿ.

2) ಹದಿಹರೆಯದವರನ್ನು ಕುರಿತ ಮಾತುಗಳನ್ನು ಬರೆಯಿರಿ.

**ಅಥವಾ**

ಒಂದು ಮಾಣಿಯ ಪರಿಣಯ ಪ್ರಸಂಗದ ಆಶಯವನ್ನು ಬರೆಯಿರಿ.

3) ನವ ಮಾಧ್ಯಮಗಳು ಯಾವುವು ? ವಿವರಿಸಿರಿ.

**ಅಥವಾ**

ಬಾಹ್ಯಾಕಾಶದಲ್ಲಿ ಅಂತರ್ಜಾಲ ಸಂಪರ್ಕವನ್ನು ಒದಗಿಸುವುದು ಹೇಗೆ ? ವಿವರಿಸಿ.

III. ಈ ಕೆಳಗಿನವುಗಳಲ್ಲಿ **ಒಂದು** ಪದ್ಯದ ಸಂದರ್ಭ ಮತ್ತು ಭಾವಾರ್ಥ ಸ್ವಾರಸ್ಯವನ್ನು ಬರೆಯಿರಿ : **(1×5=5)**

1) ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ್ ಪದವಾಡ್ತೀನಿ
ನನ್ ಮನಸನ್ನ್ ನೀ ಕಾಣೆ.

2) ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು.

IV. **ಎರಡು** ವಾಕ್ಯಗಳ ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ : **(2×4=8)**

1) ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ.

2) ಪರ್ಪಂಚ್ ಇರೋತನಕ ಮುಂದೆ ಕನ್ನಡ್ ಪದಗೊಳ್ ನುಗ್ಲಿ.

3) ನಂದನದ ಪುಷ್ಪೋದ್ಯಾನದಲಿ ನಾಗ ಸಂಚಾರವಿರಬಹುದು.

4) ಕೊನೆಗೂ ಬಂದೇ ಬಿಟ್ಟಿತು ಆ ಪರ್ವದಿನ.

V. ಎಲ್ಲಾ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(8×1=8)**

1) ಎಂ. ಗೋವಿಂದ ಪೈ ಎಲ್ಲಿಯವರು ?

2) 'ರತ್ನನ ಪದಗಳು' ಕವನ ಸಂಕಲನದ ಕವಿ ಯಾರು ?

3) 'ಹುಚ್ಚು ಕೋಡಿ ಮನಸ್ಸು' ಯಾರ ಕವಿತೆ ?

4) 'ಕನ್ನಡದ ಚೆಲುವು' ಲೇಖನವನ್ನು ಬರೆದವರು ಯಾರು ?

5) ಲಂಕೇಶ್‌ರವರು ಆರಂಭಿಸಿದ ಪತ್ರಿಕೆ ಯಾವುದು ?

6) 'ತಾಯಿಕೊಟ್ಟ ವರ' ಪ್ರಬಂಧದ ಲೇಖಕ ಯಾರು ?

7) ಅಮಾಸನ ಜೊತೆಗಿದ್ದ ಮುದುಕನ ಹೆಸರೇನು ?

8) ಇಂಟರ್‌ನೆಟ್ ಎಂಬ ಪದವನ್ನು ಮೊದಲಿಗೆ ಯಾವ ಇಸವಿಯಲ್ಲಿ ಬಳಸಲಾಗಿದೆ ?

---